KARN010005762026

M H ANNAYYANAVAR

Digitally signed by M H ANNAYYANAVAR
Date: 2026.04.10 14:40:58 +0530

| | | |
|---|---|---|
| Presented on | : | 17-03-2026 |
| Registered on | : | 17-03-2026 |
| Decided on | : | 10-04-2026 |
| Duration | : | 24 days |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ 10 ಏಪ್ರಿಲ್ ಮಾಹೆ 2026**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 185/2026**

ಅರ್ಜಿದಾರರು : (ಆರೋಪಿ)

ಶ್ರೀ ವೆಂಕಟೇಶಯ್ಯ,
ಬಿನ್ ಲೇಟ್ ಚೆನ್ನೇಗೌಡ,
ವಯಸ್ಸು ಸುಮಾರು 54 ವರ್ಷ,
ವಾಸಃ ಕೊಮ್ಮನಹಳ್ಳಿ ಗ್ರಾಮ,
ಕಸಬಾ ಹೋಬಳಿ, ಅಬ್ಬೂರ್ ಪೋಸ್ಟ್,
ಚನ್ನಪಟ್ಟಣ ತಾಲ್ಲೂಕು,
ಬೆಂಗಳೂರು ದಕ್ಷಿಣ ಜಿಲ್ಲೆ.

(ಪರವಾಗಿ ಶ್ರೀ ನವೀನ್ ಕುಮಾರ್.ಹೆಚ್.ಸಿ., ವಕೀಲರು)

- ವಿರುದ್ಧ -

ಎದುರುದಾರರು:

ಸರ್ಕಾರದ ಪರವಾಗಿ
ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ,
ಬೆಂಗಳೂರು ದಕ್ಷಿಣ ಜಿಲ್ಲೆ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **482** ರಡಿ ಜಾಮೀನು ಅರ್ಜಿಯ ಮೇಲೆ ಆದೇಶ

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿ, ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?

2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

## <u>ಕಾರಣಗಳು</u>

5. <u>ಅಂಶ ಸಂಖ್ಯೆ **1:**</u> ಪಿರ್ಯಾದುದಾರರು ಕೊಟ್ಟ ದೂರಿನಂತೆ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು ಅರ್ಜಿದಾರರ ವಿರುದ್ಧ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಅಪರಾಧ ಸಂಖ್ಯೆ 59/2026 ಭಾರತೀಯ ನ್ಯಾಯ ಸಂಹಿತೆ 2023 ಕಲಂ.115(2), 74, 352, 351(2) ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

6. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ**:**</u> ದೂರನ್ನು ಪರಿಶೀಲಿಸಲಾಗಿ, ಕೋಮನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.28/9 ರಲ್ಲಿ ಒಟ್ಟು 0.21 ಗುಂಟೆ ಜಮೀನು ಪಿರ್ಯಾದುದಾರರ ಗಂಡನ ಹೆಸರಿನಲ್ಲಿದ್ದು, ಪಿರ್ಯಾದುದಾರರ ಜಮೀನಿನ ಪಕ್ಕದ ಜಮೀನಿನವರಾದ ವೆಂಕಟೇಶಯ್ಯ ಎಂಬುವವರಿಗೆ ಸೇರಿದ 28/10, 28/3, 28/2, 28/4

ಜಮೀನು ಇರುತ್ತದೆ. ಸರ್ವೆ ನಂ.28/8 ಮತ್ತು ಸರ್ವೆ ನಂ.28/10, 28/3, 2/2 ರ ಮದ್ಯೆ ಸರ್ಕಾರಿ ರಾಜಕಾಲುವೆ (ಹಳ್ಳ) ದಾರಿ ಇದ್ದು, ಈ ದಾರಿ ಮೂಲಕ ಅನಾಧೀ ಕಾಲದಿಂದಲೂ ಓಡಾಡಿಕೊಂಡಿರುತ್ತಾರೆ. ವೆಂಕಟೇಶಯ್ಯ ಪಿರ್ಯಾದುದಾರರಿಗೆ ರಾಜ ಕಾಲುವೆ ದಾರಿಯ ಮೇಲೆ ಓಡಾಡದಂತೆ ಪಿರ್ಯಾದುದಾರರ ತೋಟದ ತೆಂಗಿನ ಗರಿ ಮತ್ತು ಸೌದೆಗಳನ್ನು ಸದರಿ ಸ್ಥಳದಲ್ಲಿ ಹಾಕಿ, ಸರ್ಕಾರಿ ರಾಜ ಕವಲುವೆ ದಾರಿಯನ್ನು ತಮ್ಮ ಜಮೀನಿಗೆ ಒತ್ತುವರಿ ಮಾಡಿಕೊಂಡಿರುತ್ತಾರೆ. ದಿನಾಂಕಃ16-02-2026 ರಂದು ಪಿರ್ಯಾದುದಾರರು ಹಾಗೂ ಅವರ ಗಂಡನ ಅಣ್ಣ ಪಾರ್ಥ ಸರ್ವೆ ನಂ.28/8 ರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ವೆಂಕಟೇಶಯ್ಯರವರು ಸರ್ವೆ ನಂ.28/8 ರಲ್ಲಿ ಹಾಕಿದ್ದ ತೆಂಗಿನ ಸೌದೆ, ಗರಿಗಳಿಗೆ ಯಾರೋ ಬೆಂಕಿ ಹಚ್ಚಿದ್ದು, ಸದರಿ ಬೆಂಕಿಯ ಕಿಡಿ ಅವರ ಬೆಳೆಗೆ ತಗಲಿರುವುದರಿಂದ ತೋಟದಲ್ಲಿ ಕೆಲಸದಲ್ಲಿದ್ದ ಪಿರ್ಯಾದುದಾರರನ್ನು ನೋಡಿ ತಾವು ಬೆಂಕಿ ಹಚ್ಚಿದ್ದೇವೆಂದು ತಪ್ಪಾಗಿ ಭಾವಿಸಿ, ಪಿರ್ಯಾದುದಾರರಿಗೂ ಮತ್ತು ಅವರ ಗಂಡ ಹಾಗೂ ಅವರ ಭಾವನವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ಪಿರ್ಯಾದುದಾರರು ನಾವು ಬೆಂಕಿ ಹಚ್ಚಿಲ್ಲ, ಏಕೆ ಬೈಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ ವೆಂಕಟೇಶಯ್ಯರವರು ಪಿರ್ಯಾದುದಾರರ ಮೈ ಕೈಯನ್ನು ಮುಟ್ಟಿ ಎಳೆದಾಡಿ, ಕೆಟ್ಟದಾಗಿ ಬೈದು, ಕೂದಲು ಹಿಡಿದು ಎಳೆದಾಡಿದ್ದು, ಬಿಡಿಸಿಕೊಳ್ಳಲು ಬಂದ ಪಿರ್ಯಾದುದಾರರ ಗಂಡ ಮತ್ತು ಭಾವ ಇವರಿಗೆ ಬೈದು ನಿಮಗೆ ಒಂದು ಗತಿ ಕಾಣಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಈ ಕಾರಣದಿಂದ ಪಿರ್ಯಾದಿ ಅರ್ಜಿದಾರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದರೂ ಸಹಿತ ಜೀವವಾಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ ಮತ್ತು ಮಾನ್ಯ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಂತಹ ಆಪಾದನೆ ಆಗಿರುತ್ತದೆ.

8. ಕೇಸ್ ಡೈರಿ ಪರಿಶೀಲಿಸಲಾಗಿ, ಅರ್ಜಿದಾರರು ಪಿರ್ಯಾದಿ ಮತ್ತು ಇನ್ನಿತರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ಸದರಿ ಘಟನೆಗೆ ಸಂಬಂಧಪಟ್ಟಂತೆ ದಿನಾಂಕಃ17-02-2020 ರಂದು ದೂರು ಕೊಟ್ಟಿದ್ದು, ಆ ಪ್ರಕಾರ ಕ್ರೈಂ.ನಂ.40/2026 ಬಿ.ಎನ್.ಎಸ್. ಕಾನೂನು ಕಲಂ.189(2), 115(2), 118(1), 324(4), 352, 351(2), 190 ಅಡಿಯಲ್ಲಿ ಕೇಸು ದಾಖಲಾಗಿದ್ದು, ಸದರಿ ಕೇಸು ದಾಖಲಾಗಿ 26 ದಿವಸದ ನಂತರ ಪಿರ್ಯಾದಿದಾರರು ಅರ್ಜಿದಾರರ ವಿರುದ್ಧ ಈ ದೂರು ಕೊಟ್ಟಿದ್ದು, ತಮ್ಮ ಮೇಲೆ ಇರುವ ಕೇಸಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ದೂರು ಕೊಟ್ಟಿರುತ್ತಾರೆ ಅಂತ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ತಡವಾಗಿ ದೂರು ಕೊಡಲು ಕಾರಣ ಏನು ಅಂತ ಸಮರ್ಪಕವಾದ ಕಾರಣಗಳನ್ನು ನೀಡಿಲ್ಲದೇ ಇರುವುದರಿಂದ, ಇಂಥ ಸಂದರ್ಭದಲ್ಲಿ ಅರ್ಜಿದಾರರು ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುತ್ತಾರೆ.

9. ಅರ್ಜಿದಾರರು ಬೆಂಗಳೂರು ದಕ್ಷಿಣ ಜಿಲ್ಲಾ ರಹವಾಸಿಯಾಗಿದ್ದು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದು ತಲೆ ಮರೆಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ

ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದು ಸೂಕ್ತ ಅಂತ ನ್ಯಾಯಾಲಯಕ್ಕೆ ಕಂಡುಬಂದಿರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

10. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ಅಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿ ಅರ್ಜಿದಾರರಿಂದ ರೂ.50,000/- (ಐವತ್ತು ಸಾವಿರ ರೂಪಾಯಿ) ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನುದಾರರನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

### <u>ಷರತ್ತುಗಳು</u>

1. ಅರ್ಜಿದಾರರು ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
2. ಅರ್ಜಿದಾರರು ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ ಹಾಗೂ ತನಿಖೆಗೆ ಸಹಕರಿಸತಕ್ಕದ್ದು.
3. ನ್ಯಾಯಾಲಯಕ್ಕೆ ತಪ್ಪದೇ ಎಲ್ಲಾ ವಿಚಾರಣೆ ದಿನಾಂಕ ದಂದು ಹಾಜರಿರತಕ್ಕದ್ದು.

4. ಅರ್ಜಿದಾರರು ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.
5. ಆದೇಶ ಆದ 15 ದಿವಸದೊಳಗೆ ಅರ್ಜಿದಾರರು ಸಂಬಂಧಪಟ್ಟ ದಂಡಾಧಿಕಾರಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಲು ಆದೇಶಿಸಲಾಗಿದೆ.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ ಜಾಮೀನು ಅರ್ಜಿ ವಜಾ ಆಗತಕ್ಕದ್ದು ಅಂತಾ ಆದೇಶ ಮಾಡಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ I ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ 10 ನೇ ಏಪ್ರಿಲ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.